1 ಸಂತಾಪ ಸೂಚನೆ

ವಿಷಯ ಶ್ರೀಮತಿ ಸುಶೀಲ ಚೆಲುವರಾಜು ಅವರ ನಿಧನದ ಬಗ್ಗೆ

ಮಾನ್ಯ ಸಭಾಧ್ಯಕ್ಷರು

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಸುಶೀಲ ಚೆಲುವರಾಜು ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಯಬಯಸುತ್ತೇನೆ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಸುಶೀಲ ಚೆಲುವರಾಜು ಅವರು 1937ನೇ ನವೆಂಬರ್ 5 ರಂದು ಮೈಸೂರಿನಲ್ಲಿ ಜನಿಸಿದ್ದು, ಸ್ನಾತಕೋತ್ತರ ಪದವಿ ಹೊಂದಿ ಸಾಮಾಜಿಕ ಕಾರ್ಯಕರ್ತರಾಗಿದ್ದರು ಶ್ರೀಮತಿಯವರು ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್, ಮೈಸೂರು ಜಿಲ್ಲಾ ಅಭಿವೃದ್ಧಿ ಮಂಡಳಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಸಮಾಜ ಕಲ್ಯಾಣ ಮಂಡಳಿಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಆಯುಕ್ತರಾಗಿ, ಕರ್ನಾಟಕ ರಾಜ್ಯ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕಿಯಾಗಿ, ಹೆಗ್ಗಡದೇವನ ಕೋಟೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಿಣಿಯಾಗಿ, ಕರ್ನಾಟಕ ರಾಜ್ಯ ಮಹಿಳಾ ಸಲಹಾ ಮಂಡಳಿಯ ಉಪಾಧ್ಯಕ್ಷರಾಗಿ ಹಾಗೂ ಇನ್ನಿತರೆ ಹಲವಾರು ಸಾಮಾಜಿಕ ಸಂಘಟನೆಗಳಲ್ಲಿ ಪಾಲ್ಗೊಂಡು ಸೇವೆ ಸಲ್ಲಿಸಿದ್ದರು 1978 ರಲ್ಲಿ ಆರನೇ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಹೆಗ್ಗಡದೇವನ ಕೋಟೆ ಕ್ಷೇತ್ರದಿಂದ ಚುನಾಯಿತರಾಗಿ ಕಾರ್ಯನಿರ್ವಹಿಸಿದ್ದರು

ಶ್ರೀಮತಿಯವರು ದಿನಾಂಕ 10–5–2007 ರಂದು ನಿಧನ ಹೊಂದಿದರು

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) ಮಾನ್ಯ ಅಧ್ಯಕ್ಷರೆ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಸುಶೀಲ ಚೆಲುವರಾಜುರವರು ನಿಧನ ಹೊಂದಿರುವಂತಹ ಸಂತಾಪ ಸೂಚನೆಯನ್ನು ತಾವು ಮಂಡಿಸಿದ್ದೀರಿ ಶ್ರೀಮತಿ ಸುಶೀಲ ಚೆಲುವರಾಜುರವರು 1937ನೇ ನವೆಂಬರ್ 5 ರಂದು ಮೈಸೂರಿನಲ್ಲಿ ಜನಿಸಿದ್ದು ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬೇರೆ ಬೇರೆ ರೀತಿಯಲ್ಲಿ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿಗಾಗಿ ಬಹಳ ದುಡಿದಂತಹ ಒಬ್ಬ ದಕ್ಷ ಮಹಿಳೆಯನ್ನು ನಾವು ಕಳೆದುಕೊಂಡು ಕರ್ನಾಟಕವು ಬಡವಾಗಿದೆ ತಾವು ತಂದಿರುವಂತಹ ಸಂತಾಪ ಸೂಚನೆಗೆ ಬೆಂಬಲವನ್ನು ಸೂಚಿಸುತ್ತಾ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಶ್ರೀಮತಿ ಸುಶೀಲ ಚೆಲುವರಾಜುರವರು ನಮ್ಮ ಜೊತೆಯಲ್ಲಿ ವಿಧಾನಸಭೆಯ ಸದಸ್ಯರಾಗಿದ್ದರು ಆಗ ನಾನು ನಗರಾಭಿವೃದ್ಧಿ ಸಚಿವನಾದಾಗ ಬಹಳಷ್ಟು ಸಲ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಸಮಸ್ಯೆಗಳ ಬಗ್ಗೆ ಸಮಾಲೋಚನೆಯನ್ನು ಮಾಡುತ್ತಿದ್ದರು ಅದು ಅಷ್ಟೇ ಅಲ್ಲ, ಇವತ್ತು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮೆಂಬರ್ ಆಗಿ ಅಲ್ಲಿಯ ಡೆವಲಪ್‌ಮೆಂಟ್ ಬೋರ್ಡ್‌ನ ಸದಸ್ಯರಾಗಿ, ಜಿಲ್ಲಾ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಆಯುಕ್ತರಾಗಿ ಬಹಳಷ್ಟು ಸಾರ್ವಜನಿಕ ಕ್ಷೇತ್ರದಲ್ಲಿ ಆಸಕ್ತಿಯನ್ನು ವಹಿಸಿ ಕೆಲಸ ಮಾಡುತ್ತಿದ್ದಂತಹ ಮಹಿಳೆಯಾಗಿದ್ದರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಪಟ್ಟಂತಹ ಮಹಿಳೆಯಾಗಿದ್ದರು ತಮಗೆ ಗೊತ್ತಿದ್ದ ಹಾಗೆ ಹೆಗ್ಗಡದೇವನ ಕೋಟೆಯಲ್ಲಿ ಈ ಒಂದು tribals problems ಬಹಳ ಸಮಸ್ಯೆ ಇತ್ತು ಆಗ ಮಾನ್ಯ ಡಿ ದೇವರಾಜ ಅರಸುರವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು ಆಂತಹ ಒಂದು ಕಾಲದಲ್ಲಿ ಇವರು ಮಹಿಳಾ ಸದಸ್ಯರಾಗಿ ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಅವರು ನಮ್ಮನ್ನು ಅಗಲಿ ಹೋಗಿದ್ದಾರೆ ತಾವು ಮಂಡಿಸಿದಂತಹ ಸಂತಾಪ ಸೂಚನೆಯನ್ನು ನಾನು ಕೂಡ ಬೆಂಬಲಿಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೆ, ಶ್ರೀಮತಿ ಸುಶೀಲ ಚೆಲುವರಾಜುರವರು ನಿಧನರಾಗಿರುವ ಬಗ್ಗೆ ನಾನೂ ಕೂಡ ಸಂತಾಪ ಸೂಚನೆಯನ್ನು ನನ್ನ ಹಾಗೂ ನನ್ನ ಪಕ್ಷದ ಪರವಾಗಿ ಅರ್ಪಿಸುತ್ತಾ ಮಹಿಳೆಯರು ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿರುಸುವುದೇ ಕಷ್ಟವೆನ್ನುವಂತಹ ಕಾಲದಲ್ಲಿ, ಮೈಸೂರಿನಲ್ಲಿ ಸುಮಾರು ಜನರು ಮಹಿಳೆಯರು ಸಕ್ರಿಯವಾಗಿರುವಂತಹ ಕಾಲ ಅದು ನಾವೆಲ್ಲರೂ ವಿದ್ಯಾರ್ಥಿಗಳಾಗಿದ್ದಾಗ ಶ್ರೀಮತಿ ಯಶೋದಮ್ಮನವರ ಬಗ್ಗೆ ಶ್ರೀಮತಿ ಸುಶೀಲರವರ ಬಗ್ಗೆ ಏನು ಅವರುಗಳು ಸಾರ್ವಜನಿಕ ಕ್ಷೇತ್ರದಲ್ಲಿದ್ದರು, ಅವರ ಬಗ್ಗೆ ನಾವೆಲ್ಲರೂ ಬಹಳಷ್ಟು ಮಾತನಾಡಿಕೊಳ್ಳುತ್ತಿದ್ದೆವು ಅವರು ಬಹಳ ವರ್ಷಗಳು ನೇಪಥ್ಯದಲ್ಲಿದ್ದರು ಅವರು ಇನ್ನೂ ಮೊನ್ನೆ ತೀರಿಕೊಂಡಿರುವ ಬಗ್ಗೆ ಕೇಳಿದಾಗ ನನಗೆ ಆಘಾತವಾಯಿತು ಒಂದು ಬಹಳ ಕೆಳಸ್ತರದ ಸಮಾಜವನ್ನು ಪ್ರತಿನಿಧಿಸಿ ಸಾರ್ವಜನಿಕ ಸೇವೆ ಮಾಡಿ ನಮ್ಮ ಮಧ್ಯದಿಂದ ಏನು ಅಗಲಿಹೋಗಿದ್ದಾರೆ, ಅವರ ಆತ್ಮಕ್ಕೆ ಶಾಂತಿ ಸಿಗಲಿ, ಮುಂದೆ ಬರುವಂತಹ ಮಹಿಳೆಯರಿಗೆ ಅವರು ಮಾರ್ಗದರ್ಶಕವಾಗಿರಲಿ, ಅವರು ನಡೆದ ದಾರಿಯನ್ನು ಅನುಸರಿಸುತ್ತಿರುವಂತಹ ಸ್ಥಿತಿ ನಿರ್ಮಾಣವಾಗಲಿ ಎಂದು ಆಶಿಸಿ, ಅವರ ಕುಟುಂಬದವರಿಗೆ ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಭಗವಂತ ಕೊಡಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು ದಿವಂಗತರಾದ ಶ್ರೀಮತಿ ಸುಶೀಲ ಚೆಲುವರಾಜುರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು

2 ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಚರ್ಚೆ

ಅ) ವಿಷಯ 2007ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ ಹಿಂದಿರುಗಿಸಲ್ಪಟ್ಟಿರುವ ಕುರಿತು

ಶ್ರೀ ಜೆ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಒಂದು adjournment motion ಇದೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಎರಡೂ ಸದನಕ್ಕೆ ಮಾನ್ಯ ರಾಜ್ಯಪಾಲರು ಒಂದು ಮೆಸೇಜ್‌ನ್ನು ಕಳುಹಿಸಿಕೊಟ್ಟಿದ್ದಾರೆ ತಾವು ಇದನ್ನು ಕೇಳಬೇಕು ಇದು ಮಹತ್ವವಾದ ವಿಚಾರವಾಗಿದೆ

ಅಧ್ಯಕ್ಷರು ಇದನ್ನು Question Hour ಆದ ಮೇಲೆ ತೆಗೆದುಕೊಳ್ಳಬಹುದಲ್ಲಾ?

ಶ್ರೀ ಎನ್ ಧರ್ಮಸಿಂಗ್ ಇಲ್ಲಾ, ಇಲ್ಲಾ ಅದನ್ನು ಬದಿಗಿಟ್ಟು ಮಾಡಬೇಕಾಗುತ್ತದೆ ಮಾನ್ಯ ರಾಜ್ಯಪಾಲರ ಪತ್ರಕ್ಕೆ ಹಾಗೂ ಸಂದೇಶಕ್ಕೆ ಸದನ ಗೌರವವನ್ನು ಕೊಡಬೇಕಾಗುತ್ತದೆ ಹಾಗೂ ಮಹತ್ವವನ್ನು ಕೊಡಬೇಕಾಗುತ್ತದೆ ಗ್ರಾಮ ಪಂಚಾಯಿತಿಯಿಂದ, ತಾಲ್ಲೂಕು ಪಂಚಾಯಿತಿಯಿಂದ ಹಾಗೂ ಜಲ್ಲಾ ಪಂಚಾಯಿತಿಯಿಂದ ಇವತ್ತು ವಿಧಾನ ಪರಿಷತ್ತಿನ ಸದಸ್ಯರುಗಳು ಹೋಗಿ ರಾಜ್ಯಪಾಲರನ್ನು ಭೇಟಿಯಾದ ಮೇಲೆ, ಮೊಟ್ಟಮೊದಲನೆಯದಾಗಿ ರಾಜ್ಯಪಾಲರು ಒಂದು ಸಂದೇಶವನ್ನು ಈ ಸದನಕ್ಕೆ ಕಳುಹಿಸಿಕೊಟ್ಟಿದ್ದಾರೆ ನಾವು ಯಾರ ಮೇಲೂ ಅಲಿಗೇಷನ್ಸ್‌ನ್ನು ಮಾಡುವುದಕ್ಕೆ ಹೋಗುತ್ತಿಲ್ಲ ನಾನು ಮೊನ್ನೆ ದಿನವೂ ಕೂಡ ಶೂನ್ಯ ವೇಳೆಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿದ್ದೆ ಮಾನ್ಯ ಉದಾಸಿಯವರು ಈ ಬಗ್ಗೆ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದರು ಇವತ್ತು ಏನಾಗಿದೆ ಎಂದರೆ, ಶ್ರೀ ರಾಜೀವ್ ಗಾಂಧಿಯವರು ಇವತ್ತು ಸಂವಿಧಾನದಲ್ಲಿ ತಿದ್ದುಪಡಿಯನ್ನು ಮಾಡಿದರು ಸುಪ್ರೀಂ ಕೋರ್ಟಿನಲ್ಲಿ ಕೂಡ ತೀರ್ಪು ಇದೆ ಯಾವ ಸಂವಿಧಾನದ ತಿದ್ದುಪಡಿ ಲೋಕಸಭೆಯಲ್ಲಿ ಆಗಿದೆ, ಅದಕ್ಕೆ ಮತ್ತೆ ಬೇರೆ ತರಹ ಆರ್ಟಿಕಲ್ 40ರಲ್ಲಿ ತಿದ್ದುಪಡಿ ತರುವಂತಹ ಅವಶ್ಯಕತೆಯಿಲ್ಲ ಈ ಬಗ್ಗೆ ನಾವು ಸಾಕಷ್ಟು ಪ್ರತಿಪಾದನೆಯನ್ನು ಮಾಡಿದ್ದೇವೆ ಇವತ್ತು ಸಂಖ್ಯಾಬಲದ ಮೇಲೆ, ಶಾಸಕರನ್ನು ತೃಪ್ತಿ ಮಾಡುವಂತಹ ರೀತಿಯಲ್ಲಿ ರಾಜ್ಯದಲ್ಲಿ ನಡೆಯುತ್ತಿರುವಂತಹ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಗೆ ಇವತ್ತಿನ ದಿವಸ ಧಕ್ಕೆ ತರುವಂತಹ ಕೆಲಸ ಕರ್ನಾಟಕ ರಾಜ್ಯದಲ್ಲಿ ಆಗಿದೆ ಪ್ರಧಾನ ಮಂತ್ರಿಗಳು